BANGALORE
THE IT CAPITAL OF INDIA

KEONICS
ISO 9001 : 2015

# ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ
# Karnataka State Electronics Development Corporation Limited
(A Government of Karnataka Enterprise)
CIN No. U75112KA1976SGC003055)

ಸಂಖ್ಯೆ: ಕೆಎಸ್ಇಡಿಸಿ/ಇಎಸ್‌ಟಿ/ನೇ.ನೇ/01/2024-25 ದಿನಾಂಕ: 24.02.2025

**ಅಧಿಕೃತ ಜ್ಞಾಪನ**

**ತಾತ್ಕಾಲಿಕ ಆಯ್ಕೆ ಪಟ್ಟಿ (ಹೆಚ್ಚುವರಿ)**

ಕಿಯೋನಿಕ್ಸ್ ಸಂಸ್ಥೆಯು, ಕಲ್ಯಾಣ ಕರ್ನಾಟಕ ಪ್ರದೇಶ (ಸ್ಥಳೀಯ) ವೃಂದದ 06 ವಿವಿಧ ಹುದ್ದೆಗಳಿಗೆ ಮತ್ತು ಉಳಿಕೆ ಮೂಲ ವೃಂದದ 10 ಹುದ್ದೆಗಳಿಗೆ, ನೇರ ನೇಮಕಾತಿ ಸಂಬಂಧ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ **ದಿನಾಂಕ:23.06.2023** ರಂದು **ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.15/2022-23 (ಕೆಕೆ)** ಮತ್ತು **ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.15/2022-23 (ಆರ್‌ಪಿಸಿ)** ಅಧಿಸೂಚನೆ ಹೊರಡಿಸಲಾಗಿತ್ತು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರದವರು ಲಿಖಿತ ಪರೀಕ್ಷೆಯನ್ನು ನಡೆಸಿ ಅಭ್ಯರ್ಥಿಗಳು ಪಡೆದುಕೊಂಡ ಅಂಕಪಟ್ಟಿಯ ವಿವರಗಳನ್ನು ಕಿಯೋನಿಕ್ಸ್ ಸಂಸ್ಥೆಗೆ ನೀಡಿರುತ್ತಾರೆ. ಸದರಿ ಅಂಕಪಟ್ಟಿಯನ್ನು ಪರಿಶೀಲಿಸಿ, ಅರ್ಹ ಅಭ್ಯರ್ಥಿಗಳಿಗೆ 1:3 ಅನುಪಾತದಲ್ಲಿ ದಾಖಲಾತಿ ಪರಿಶೀಲನೆಗೆ ಹಾಜರಾಗಲು ಅಭ್ಯರ್ಥಿಗಳಿಗೆ ತಿಳುವಳಿಕೆ ಪತ್ರವನ್ನು ನೀಡಲಾಗಿರುತ್ತದೆ.

ದಾಖಲಾತಿ ಪರಿಶೀಲನೆಗೆ ಹಾಜರಾದ ಅರ್ಹ ಅಭ್ಯರ್ಥಿಗಳ ದಾಖಲಾತಿಗಳನ್ನು ಪರಿಶೀಲಿಸಿ **ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ದಿನಾಂಕ: 12.02.2025** ರಂದು ಹಾಗೂ
**ತಾತ್ಕಾಲಿಕ ಆಯ್ಕೆ ಪಟ್ಟಿ (ಹೆಚ್ಚುವರಿ)**ಯನ್ನು **ದಿನಾಂಕ: 21.02.2025 ರಂದು** ಕಿಯೋನಿಕ್ಸ್ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿರುತ್ತದೆ.

ದಿನಾಂಕ:12.02.2025 ರಂದು ಪ್ರಕಟಿಸಲಾಗಿದ್ದ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಶ್ರೀ. ಪ್ರಕಾಶ್ (ಅರ್ಜಿ ಸಂ: 7001040) ರವರು ಕೆಳಗೆ ಕಾಣಿಸಿದ ಹುದ್ದೆಗಳಿಗೆ ಆಯ್ಕೆಯಾಗಿರುತ್ತಾರೆ.

1. ಸಹಾಯಕರು (ತಾಂತ್ರಿಕ) – GM – ಉಳಿಕೆ ಮೂಲ ವೃಂದ
2. ಸಹಾಯಕರು (ತಾಂತ್ರಿಕ) – ಕಲ್ಯಾಣ ಕರ್ನಾಟಕ ವೃಂದ

ಮುಂದುವರೆದು, **ಶ್ರೀ. ಪ್ರಕಾಶ್ (ಅರ್ಜಿ ಸಂ: 7001040) ರವರು** ಸಹಾಯಕರು (ತಾಂತ್ರಿಕ) – ಕಲ್ಯಾಣ ಕರ್ನಾಟಕ ವೃಂದದ ಹುದ್ದೆಯನ್ನು ಆಯ್ಕೆಮಾಡಿಕೊಂಡಿರುತ್ತಾರೆ. ಆದ್ದರಿಂದ, ಸಹಾಯಕರು (ತಾಂತ್ರಿಕ)–GM–**ಉಳಿಕೆ ಮೂಲ ವೃಂದದ ಹುದ್ದೆಯು ತೆರವಾಗಿರುತ್ತದೆ.**

ಈ ತೆರವಾಗಿರುವ ಹುದ್ದೆಗೆ ಅರ್ಹ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಸಂಬಂಧ **ದಿನಾಂಕ: 24.02.2025** ರಂದು ಅರ್ಹ ಅಭ್ಯರ್ಥಿಗಳ (1:3 ಅನುಪಾತದಲ್ಲಿ) ದಾಖಲಾತಿ ಪರಿಶೀಲನೆಯನ್ನು ಮಾಡಲಾಗಿರುತ್ತದೆ ಹಾಗೂ ಆಯ್ಕೆಯಾದ ಅಭ್ಯರ್ಥಿಯ ವಿವರವನ್ನು ಕೆಳಗೆ ನೀಡಲಾಗಿದೆ.

**(ಉಳಿಕೆ ಮೂಲ ವೃಂದ)**

**ಆಯ್ಕೆಯಾದ ಅಭ್ಯರ್ಥಿಯ ತಾತ್ಕಾಲಿಕ ಆಯ್ಕೆ ಪಟ್ಟಿ (ಹೆಚ್ಚುವರಿ)**

| ಕ್ರ. ಸಂ | ಹುದ್ದೆ | ಹೆಸರು | ನೋಂದಣಿ ಸಂಖ್ಯೆ | ಪ್ರವರ್ಗ/ ಪುರುಷ: ಮಹಿಳೆ | ಗಳಿಸಿದ ಅಂಕ |
|---|---|---|---|---|---|
| 1 | ಸಹಾಯಕರು (ತಾಂತ್ರಿಕ) | GIRISHA S | 7002862 | GM/3B | 137.5 |

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿ (ಹೆಚ್ಚುವರಿ), ಸಂಬಂಧ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಈ ತಾತ್ಕಾಲಿಕ ಆಯ್ಕೆ ಪಟ್ಟಿ (ಹೆಚ್ಚುವರಿ) ಪ್ರಕಟಿಸಿದ 07 ದಿನಗಳೊಳಗಾಗಿ ಕಿಯೋನಿಕ್ಸ್ ಸಂಸ್ಥೆಯ ನಿರ್ದೇಶಕರು (ನಿರ್ವಹಣೆ) ಇವರಿಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

(ವ್ಯವಸ್ಥಾಪಕ ನಿರ್ದೇಶಕರಿಂದ ಹಾಗೂ
ಆಯ್ಕೆ ಸಮಿತಿಯಿಂದ ಅನುಮೋದಿಸಲ್ಪಟ್ಟಿದೆ)

Praveen 24/02/2025

( ಪ್ರವೀಣ್.ಕೆ.ಎನ್ )

ನಿರ್ದೇಶಕರು (ನಿರ್ವಹಣೆ) ಹಾಗೂ ಸದಸ್ಯ
ಕಾರ್ಯದರ್ಶಿಗಳು ಆಯ್ಕೆ ಸಮಿತಿ